www.varthabharati.in
ಜನದನಿಯ ಸಾರಥಿ
epaper.varthabharati.in

# ವಾರ್ತಾ ಭಾರತಿ

ಸತ್ಯ ಎಲ್ಲರ ದನಿ
◆ ಮಂಗಳೂರು ◆ ಬೆಂಗಳೂರು ◆ ಶಿವಮೊಗ್ಗ
12 ಜೂನ್ 2018
ಮಂಗಳವಾರ
VARTHABHARATHI KANNADA DAILY
/ Varthabharati
REGD.NO: MNG/958/2016-18 RNI N0. KAR KAN/2003/11378
● ಸಂಪುಟ 15 ● ಸಂಚಿಕೆ 279 ● ಮಂಗಳೂರು

FOR COMPUT
EYE TESTI
QUALITY SPEC
Ph : 0824-
0824-
RUSSE
Gousiya Complex,
Ashirvad Building, N

# 35 ಇಂಜಿನಿಯರಿಂಗ್ ಕಾಲೇಜುಗಳಿಂದ 75 ಕೋರ್ಸ್‌ಗಳ ಸ್ಥಗಿತ

ಬೆಂಗಳೂರು, ಜೂ.11: ರಾಜ್ಯದ ಕೆಲ ಶಿಕ್ಷಣ ಸಂಸ್ಥೆಗಳ ಪರಿಸ್ಥಿತಿ ಅತ್ಯಂತ ಕೆಟ್ಟದಾಗಿದೆ. ಹೀಗಾಗಿ ರಾಜ್ಯದ 35ಕ್ಕೂ ಅಧಿಕ ಇಂಜಿನಿಯರಿಂಗ್ ಕಾಲೇಜುಗಳು ಸ್ವಯಂಪ್ರೇರಿತವಾಗಿ 75 ಕೋರ್ಸ್‌ಗಳನ್ನು ಸ್ಥಗಿತಗೊಳಿಸಲು ಮುಂದಾಗಿವೆ ಎಂದು ತಿಳಿದುಬಂದಿದೆ.




ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ನೀಡಿರುವ ಮಾಹಿತಿಗಳ ಪ್ರಕಾರ, ಬೆಂಗಳೂರಿನ ಆರ್‌ವಿ ಇಂಜಿನಿಯರಿಂಗ್ ಕಾಲೇಜು ಮತ್ತು ಬಿಎಂಎಸ್ ಇಂಜಿನಿಯರ್ ಕಾಲೇಜು ಸೇರಿದಂತೆ 35ಕ್ಕೂ ಅಧಿಕ ಕಾಲೇಜುಗಳು 75 ಇಂಜಿನಿಯರಿಂಗ್ ಕೋರ್ಸ್‌ಗಳ ಸ್ಥಗಿತ ಮಾಡಲು ಅನುಮತಿ ನೀಡುವಂತೆ ಮನವಿ ಮಾಡಿಕೊಂಡಿದ್ದವು. ಈ ಮನವಿಗೆ ಇದೀಗ ಎಐಸಿಟಿಇ ಅನುಮತಿ ನೀಡಿದೆ ಎಂದು ಹೇಳಲಾಗುತ್ತಿದೆ.

ಕಾಲೇಜುಗಳು ಪ್ರಾಂಶುಪಾಲರು ಹಾಗೂ ಆಡಳಿತ ಮಂಡಳಿಗಳ ವಕ್ತಾರರು ನೀಡಿರುವ ಮಾಹಿತಿಗಳ ಪ್ರಕಾರ, ಕೆಲ ಕೋರ್ಸ್‌ಗಳಿಂದ ಕಾಲೇಜುಗಳಿಗೆ ಸಮಸ್ಯೆಗಳುಂಟಾಗುತ್ತಿದ್ದು, ಈ ಕೋರ್ಸ್‌ಗಳಿಂದ ಕಾಲೇಜುಗಳಿಗೆ ಹೊರೆಯಾಗುತ್ತಿವೆ. ಆದುದರಿಂದಾಗಿ ಅಂತಹ ಕೋರ್ಸ್‌ಗಳನ್ನೇ ಸ್ಥಗಿತಗೊಳಿಸಲು ತೀರ್ಮಾನಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಇನ್ನು ಕೆಲ ಕಾಲೇಜುಗಳು ಸ್ನಾತಕೋತ್ತರ ಪದವಿಯ ಕೋರ್ಸ್‌ಗಳನ್ನೇ ಸ್ಥಗಿತಗೊಳಿಸಿವೆ. ಆರ್‌ವಿ ಇಂಜಿನಿಯರಿಂಗ್ ಕಾಲೇಜು ಡಿಜಿಟಲ್ ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಇಂಜಿನಿಯರಿಂಗ್ ಸ್ನಾತಕೋತ್ತರ ಪದವಿ ಕೋರ್ಸ್ ಅನ್ನು ಸ್ಥಗಿತಗೊಳಿಸಿದೆ. ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆರ್ಕಿಟೆಕ್ಚರ್ ಕೋರ್ಸ್ ಅನ್ನು ಸ್ಥಗಿತಗೊಳಿಸಿದೆ. ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನಲ್ಲಿ ಎರಡು ಸ್ನಾತಕೋತ್ತರ ಪದವಿಯ ಕೋರ್ಸ್ ಗಳನ್ನು ಸ್ಥಗಿತಗೊಳಿಸಿದೆ.

- ■ ಭಾರತದಲ್ಲಿಂದು ಇಂಜಿನಿಯರಿಂಗ್ ಕಾಲೇಜುಗಳು ನಾಯಿಕೊಡೆಗಳಂತೆ ತಲೆಯೆತ್ತುತ್ತಿರುವುದೇ ಇದಕ್ಕೆ ಕಾರಣ.
- ■ ಕೋರ್ಸ್‌ಗಳಿಂದ ಕಾಲೇಜುಗಳಿಗೆ ಹೊರೆಯಾಗುತ್ತಿರುವುದರಿಂದ ಕೋರ್ಸ್‌ಗಳನ್ನು ಸ್ಥಗಿತಗೊಳಿಸಲು ತೀರ್ಮಾನ.
- ■ ಕೆಲ ಕಾಲೇಜುಗಳಿಂದ ಸ್ನಾತಕೋತ್ತರ ಪದವಿಯ ಕೋರ್ಸ್‌ಗಳೂ ಸ್ಥಗಿತ

ದಯಾನಂದ ಸಾಗರ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೆಮಿಕಲ್ ಇಂಜಿನಿಯರಿಂಗ್, ಮಾಸ್ಟರ್ ಇನ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಸೇರಿದಂತೆ ವಿವಿಧ ಕೋರ್ಸ್‌ಗಳನ್ನು ಸ್ಥಗಿತಗೊಳಿಸಿದೆ. ಶ್ರೀ ವೆಂಕಟೇಶ್ವರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಲೆಕ್ಟ್ರಿಕಲ್ ಆ್ಯಂಡ್ ಇಲೆಕ್ಟ್ರಾನಿಕ್ಸ್ ಕೋರ್ಸ್‌ಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ತಿಳಿದುಬಂದಿದೆ.

ನಗರದ ಉನ್ನತ ಮಟ್ಟದ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರೊಬ್ಬರು ಈ ಕುರಿತು ಪ್ರತಿಕ್ರಿಯಿಸಿದ್ದು, ಕೋರ್ಸ್‌ಗಳ ಕುರಿತ ಬೇಡಿಕೆಗಳು ಕಡಿಮೆಯಾಗಿದ್ದರಿಂದಾಗಿ ಈ ರೀತಿಯ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಕಂಪ್ಯೂಟರ್ ಸಯನ್ಸ್ ಮತ್ತು ಇಲೆಕ್ಟ್ರಾನಿಕ್ಸ್ ಆ್ಯಂಡ್ ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಕೋರ್ಸ್‌ಗಳನ್ನು ಕೆಲವರಷ್ಟೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ನೆರೆ ರಾಜ್ಯಗಳಲ್ಲಿ ಕಾಲೇಜುಗಳ ಸಂಖ್ಯೆ ಹೆಚ್ಚಾಗಿದ್ದರಿಂದಾಗಿ ಬೇಡಿಕೆಗಳು ಕಡಿಮೆಯಾಗಿವೆ ಎಂದು ತಿಳಿಸಿದ್ದಾರೆ.

ಉನ್ನತ ಕಾಲೇಜುಗಳೂ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಲ್ಲಿ 180 ಸೀಟುಗಳನ್ನು ಭರ್ತಿ ಮಾಡಲು ಶ್ರಮ ಪಡುತ್ತಿವೆ. ಭಾರತದಲ್ಲಿಂದು ಇಂಜಿನಿಯರಿಂಗ್ ಕಾಲೇಜುಗಳು ನಾಯಿಕೊಡೆಗಳಂತೆ ತಲೆಯೆತ್ತುತ್ತಿರುವುದೇ ಇದಕ್ಕೆ ಕಾರಣ ಎಂದು ಮತ್ತೊಂದು ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರು ಅಭಿಪ್ರಾಯಿಸಿದ್ದಾರೆ.

ಸೋಮವಾರ,11 ಜೂನ್ 2018 | ಪುಟಗಳು: 14+4 | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 316
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ |
PRID



ಮೊದಲ ಬಾಂಡ್ ಗರ್ಲ್ ಖ್ಯಾತಿಯ ಹಾಲಿವುಡ್ ನಟಿ ಯುನ್ನೈಸ್ ಗೇಸನ್ ಇನ್ನಿಲ್ಲ

ಮಹಿಳಾ ಟಿ-20 ಏಷ್ಯಾಕಪ್: ಬಾಂಗ್ಲಾ ವನಿತೆಯರಿಗೆ ಮೊದಲ ಬಾರಿ ಒಲಿದ ಕಿರೀಟ, ಭಾರತ ರನ್ನರ್ ಅಪ್ P10

ಈ ಸಲ ಮಜಾಭಾರತ ಮಜಾನೇ ಬೇರೆ
ಈ ರಿಯಾಲಿಟಿ ಶೋನಲ್ಲಿ ಸಖತ್ ನಗಲಿದ್ದೇನೆ: ರಚಿತಾರಾಮ್

## ಎಂಜಿನಿಯರಿಂಗ್ ಪ್ರವೇಶ ಬಗ್ಗೆ ಮಾಹಿತಿ ಕೇಂದ್ರ

**ಮಂಗಳೂರು:** ಎಂಜಿನಿಯರಿಂಗ್ ಪ್ರವೇಶದ ಬಗ್ಗೆ ಮಾಹಿತಿ ನೀಡಲು, ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮಾಹಿತಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಈ ಮಾಹಿತಿ ಕೇಂದ್ರ ಪ್ರತಿದಿನ ಬೆಳಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ಕಾರ್ಯ ನಿರ್ವಹಿಸುತ್ತದೆ.

ಯಾವುದೇ ವಿದ್ಯಾರ್ಥಿ ಅಥವಾ ಪೋಷಕರು ಮಾಹಿತಿ ಕೇಂದ್ರಕ್ಕೆ ಭೇಟಿ ನೀಡಿ ನಾನಾ ಎಂಜಿನಿಯರಿಂಗ್ ಬ್ರಾಂಚ್‌ಗಳ ಬಗ್ಗೆ, ಅವುಗಳ ಉದ್ಯೋಗ ಅವಕಾಶಗಳ ಬಗ್ಗೆ, ಸಿಇಟಿ ಸೀಟು ಹಾಗೂ ಕಾಮೆಡ್-ಕೆ ಸೀಟುಗಳ ಬಗ್ಗೆ, ಕೌನ್ಸೆಲಿಂಗ್ ಬಗ್ಗೆ, ಪ್ರವೇಶ ಶುಲ್ಕದ ಬಗ್ಗೆ, ಆಪ್ಷನ್‌ಎಂಟ್ರಿ ಬಗ್ಗೆ, ಕಟ್ ಆಫ್ ರ್‍ಯಾಂಕ್‌ಗಳ ಬಗ್ಗೆ ಹಾಗೂ ಯಾವುದೇ ಇತರೆ ಮಾಹಿತಿ ಬಗ್ಗೆ ವಿವರಗಳನ್ನು ತಿಳಿದುಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.